**ಮುಖ್ಯ ನ್ಯಾಯಾಧೀಶರು, ಲಘು ವ್ಯವಹಾರಗಳ ನ್ಯಾಯಾಲಯ, ಬೆಂಗಳೂರು.**

**ಎಂ.ವಿ.ಸಿ. ಸಂಖ್ಯೆ: 5556/2025**

**PW-1**

| | |
|---|---|
| ಹೆಸರು | ಗೀತಾ |
| ಗಂಡನ ಹೆಸರು | ಮಂಜುನಾಥ |
| ವಯಸ್ಸು | **48** ವರ್ಷ |
| ವೃತ್ತಿ | ಆಯ ಕೆಲಸ |
| ವಿಳಾಸ | ಕಲ್ಯಾಣನಗರ, ಚಿಕ್ಕಮಗಳೂರು |

**ದಿನಾಂಕ: 28.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು:**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದ:**

1) ನಾನು ಈ ಪ್ರಕರಣದಲ್ಲಿ ಅರ್ಜಿದಾರಳಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯಕ್ಕೆ ಬದಲಾಗಿ, ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಯ ಮೇರೆಗೆ ಮತ್ತು ಅದಕ್ಕೆ ಅನುಸಾರವಾಗಿ ನನ್ನ ವಕೀಲರು ಸಿದ್ಧಪಡಿಸಿದ್ದಾರೆ.

2) ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೊಕದ್ದಮೆ ನಂ: **48/2025** ರಲ್ಲಿ ದಾಖಲಾಗಿರುವ ಪ್ರಥಮ ವರ್ತಮಾನ ವರದಿಯ ಯಥಾ ನಕಲನ್ನು

ಹಾಜರುಪಡಿಸಿದ್ದು ಅದನ್ನು **ನಿ.ಪಿ.1** ಎಂದು, ದೂರಿನ ಯಥಾ ನಕಲನ್ನು ಅದರ ಚೆನ್ನಾಗಿರುವ ಪ್ರತಿಯನ್ನು ಒದಗಿಸುವ ಷರತ್ತಿನೊಂದಿಗೆ ನಿ.ಪಿ.**2** ಎಂದು, ಸ್ಥಳ ಪಂಚನಾಮೆಯ ಯಥಾ ನಕಲನ್ನು ನಿ.ಪಿ.**3** ಎಂದು, ಐಎಂವಿ ವರದಿಯ ಯಥಾ ನಕಲನ್ನು ನಿ.ಪಿ.**4** ಎಂದು, ಪೋಲಿಸ್ ಇಂಟಿಮೇಷನ್ ವರದಿಯ ಯಥಾ ನಕಲನ್ನು ನಿ.ಪಿ.**5** ಎಂದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲಿಸರು ಸಲ್ಲಿಸಿರುವ ಅಂತಿಮ ವರದಿಯ ಯಥಾ ನಕಲನ್ನು ನಿ.ಪಿ.**6** ಎಂದು ಗುರುತಿಸಿದ್ದೇನೆ.

3) ಗಾಯದ ಪ್ರಮಾಣ ಪತ್ರದ ಯಥಾ ನಕಲನ್ನು ನಿ.ಪಿ.**7** ಎಂದು, ನಾನು ಕರ್ಣ ಆಸ್ಪತ್ರೆಯಲ್ಲಿ ದಿಃ**20.05.2025** ರಿಂದ ದಿಃ**26.05.2025** ರ ವರೆಗೆ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿದ್ದು ನಿ.ಪಿ.**8** ಎಂದು, ವೈದ್ಯಕೀಯ ಖರ್ಚು ರೂ.**2,30,884/-** ಕ್ಕೆ ಸಂಬಂಧಿಸಿದಂತೆ **26** ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.**9** ಎಂದು ಗುರುತಿಸಿದ್ದೇನೆ.

4) ನನ್ನ ಆಧಾರ್ ಕಾರ್ಡಿನ ನೋಟರೀಕೃತ ನಕಲನ್ನು ನಿ.ಪಿ.**10** ಎಂದು ಗುರುತಿಸಿದ್ದೇನೆ. (ಸಾಕ್ಷಿಯು ಆಧಾರ್ ಕಾರ್ಡಿನ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನೋಟರೀಕೃತ ನಕಲಿನೊಂದಿಗೆ ಹೋಲಿಸಿದ

ನಂತರ ಸಾಕ್ಷಿಗೆ ಹಿಂತಿರುಗಿಸಲಾಗಿದೆ**).**

5) ಆದ್ದರಿಂದ ಈ ಅರ್ಜಿಯಲ್ಲಿ ಕೋರಿರುವಂತೆ ಪರಿಹಾರವನ್ನು ನೀಡಬೇಕಾಗಿ ಪ್ರಾರ್ಥನೆ.

ಪಾಟೀ **ಸವಾಲುಃ 2 ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದಾರೆ. ಈ ಕೇಸಿನಲ್ಲಿ ಲಿಖಿತ ಹೇಳಿಕೆಯನ್ನು 2 ನೇ ಎದುರುದಾರರ ಪರ ಸಲ್ಲಿಸಲಾಗಿಲ್ಲ.** ಪಾಟೀ **ಸವಾಲಿಗಾಗಿ ಮುಂದೂಡುವುದಕ್ಕೆ ನ್ಯಾಯಾಲಯಕ್ಕೆ ಯಾವುದೇ ಸಕಾರಣಗಳು ಕಂಡು ಬರುತ್ತಿಲ್ಲ. ಆದ್ದರಿಂದ 2 ನೇ ಎದುರುದಾರರ ಪರ** ಪಾಟೀ **ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ.**

**ಪಾಟೀ ಸವಾಲು: 1 ನೇ ಎದುರುದಾರರು ಎಕ್ಸ್** ಪಾರ್ಟೆ **ಇದ್ದಾರೆ.**

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.